22

ಕುರಾಲ್

ತಿರುವಳ್ಳುವಾರ್ ಮಹಾಕವಿ ವಿರಚಿತ

ಸುಭಾಷಿತ.

ಸಂಗ್ರಾಹಕರು:

ಶ್ರೀ| ಡಿ. ಪುಟ್ಟಸ್ವಾಮಿ

ಬಿ. ಎ , ಬಿ. ಎಲ್., ಎಡ್ವೊಕೇಟ್,

ಸಂಪಾದಕ: "ವಿವೇಕಾಭ್ಯುದಯ" ಮಂಗಳೂರು.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆ ಎಲ್ಲರಿಗಾಗಿ ಇವೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟೆರಾಯ (ವಿನೋದ ಕಥೆ) ಲೇ: ದಿ| ಎಮ್.ಎನ್.ಕಾಮತ್
೨. ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು
೪. ಸದ್ರಿಸುಬ್ಬ (ಏಕಾಂಕ ಪ್ರಹಸನ) ಲೇ: ದಿ| ಎಮ್.ಎನ್. ಕಾಮತ್
೫. ಅದ್ಭುತ ತ್ಯಾಗ ಮತ್ತು ಇತರ ಕಥೆಗಳು (ಎಮ್. ಆರ್. ಭಟ್)
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. 'ಬೀಡಿಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ)
೯. *ಲಂಚಕ್ಕೆ ಸಂಚಕಾರ (ಡಾ| ಎಸ್. ಪಿ. ಭಟ್.)
೧೦. ಟಿಶ್ಯೂ ಔಷಧಿಗಳ ಕೈಪಿಡಿ
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿತೀಯ ಮುದ್ರಣ)
೧೨. ಜೀವದ ಮೌಲ್ಯ (ಎಲ್. ಎಸ್. ನಾಯಕ.)
೧೩. ಸತ್ತವನ ಸೇಡು (ವಿ. ಆರ್. ಭಟ್.)
೧೪. "ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ
೧೭. ಒಗಟುಗಳು (ಟಿ. ಚಂದ್ರರಾಜ ಸೆಟ್ಟಿ)
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ
೨೦. ಕರೀನಾಯಿ ಮತ್ತು ಮುಪ್ಪು. (ಲೇ: ದಿ| ಎಂ. ಎನ್. ಕಾಮತ್)
೨೧. ಭಾರತದ ಮಹಾನಗರಗಳು. (ಪ್ರಥಮ ಮತ್ತು ದ್ವಿತೀಯ ಭಾಗ)
೨೨. ತಿರುಕ್ಕುರಲ್ (ಶ್ರೀ| ಡಿ. ಪುಟ್ಟ ಸ್ವಾಮಿ)

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಇಪ್ಪತ್ತೆರಡು ಪುಸ್ತಕಗಳಲ್ಲಿ, ಒಟ್ಟು ಇಪ್ಪತ್ತೆರಡು ಅಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆಕೂಡಿ 500 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1

ಎಲ್ಲರಿಗೆ ಬೇಕಾದುದು ಒಂದಾಣೆ ಮಾಲೆಯಲ್ಲಿದೆ.

ತಿರುಕ್ಕುರಲ್

....

ಯಾವುದೇ ಜೀವಿಯನ್ನು ಕಾಯಾ, ವಾಚಾ, ಮನಸಾ ಹಿಂಸಿಸದಿರುವುದು ಮತ್ತು ಕೊಲ್ಲದಿರುವುದು ದಕ್ಷಿಣ ಭಾರತದ ತಮಿಳುನಾಡಿನ ಪ್ರಾಚೀನ ಸಾಹಿತ್ಯದಲ್ಲಿ, ಪ್ರಮುಖ ಉಪದೇಶವಾಗಿ ಅಡಕವಾಗಿದೆ. ಈ ಪ್ರಾಚೀನ ತಮಿಳು ಸಾಹಿತ್ಯವನ್ನು ಸಮಾನ ರೀತಿಯ ಧ್ಯೇಯ ಮತ್ತು ಗುಣವೈಶಿಷ್ಟ್ಯಗಳಿಂದೊಡಗೂಡಿದ ಮೂರು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಬಹುದಾಗಿದೆ. ಈ ಮೂರು ಮುಖ್ಯ ವಿಭಾಗಗಳೆಂದರೆ ಜೈನ, ಬೌದ್ಧ ಮತ್ತು ಶೈವಮತೀಯ ಹಿಂದೂಧರ್ಮಗಳಿಗೆ ಸಂಬಂಧಿಸಿದವುಗಳಾಗಿವೆ. ಈ ಮೂರು ಪ್ರಮುಖ ವಿಭಾಗಗಳಲ್ಲದೆ, "ಅಹಿಂಸಾ ಪರಮೋ ಧರ್ಮ" ಎಂದು ಸಾರುವ, ವೈದಿಕ ಸಾಹಿತ್ಯವಾದ ಉಪನಿಷತ್ತುಗಳು ಬೇರೆ ಇವೆ. ಇವುಗಳಲ್ಲಿಯೂ ಪರಸ್ಪರ ಪ್ರೀತಿಯ ಮತ್ತು ಅಹಿಂಸೆಯ ಉಪದೇಶವು ಸಾರವತ್ತಾಗಿ ಮತ್ತು ಪ್ರಧಾನವಾಗಿ ವರ್ಣಿಸಲ್ಪಟ್ಟಿದೆ.

ಅಹಿಂಸೆಯ ಪರಮತತ್ತ್ವಗಳನ್ನು ಸಾರುವ ಅನೇಕ ಪ್ರಾಚೀನ ಕೃತಿಗಳು ತಮಿಳು ಸಾಹಿತ್ಯದಲ್ಲಿ ಅಡಕವಾಗಿವೆ. ಈ ಸಾಹಿತ್ಯದಲ್ಲಿ ವಿಶಾಲವಾದ ಸಾಹಿತ್ಯದಿಂದೊಡಗೂಡಿದ ಎರಡು ಪ್ರಮುಖ ಗ್ರಂಥಗಳು ಎಲ್ಲರ ವಿಶೇಷ ಮನ್ನಣೆಗೆ ಮತ್ತು ಪ್ರಶಂಸೆಗೆ ಪಾತ್ರವಾಗಿವೆ. ಈ ಎರಡು ಗ್ರಂಥಗಳು ತಮಿಳು ಜನರ ಜೀವನ ಮತ್ತು ಧಾರ್ಮಿಕ ಭಾವನೆಗಳ ಮೇಲೆ ವಿಶೇಷ ಪರಿಣಾಮವನ್ನು ತಂದೊಡ್ಡಿವೆ ಎನ್ನುವುದಕ್ಕೆ ಅನುಮಾನವಿಲ್ಲ. ಇತರ ಎಲ್ಲ ತಮಿಳು ಗ್ರಂಥಗಳಿಗಿಂತ ಈ ಎರಡು ಗ್ರಂಥಗಳು ವಿಶೇಷ ಪ್ರಭಾವವನ್ನು ತಮಿಳರ ಮೇಲೆ ಬೀರಿವೆ ಎಂದರೂ ಅತಿಶಯೋಕ್ತಿಯಾಗಲಾರದು. ಆ ಎರಡು ಗ್ರಂಥಗಳೆಂದರೆ "**ತಿರುಕ್ಕುರಲ್**" ಮತ್ತು "**ನಾಲದಿಯಾರ್.**" ಇವೆರಡೂ ಕ್ರಿಸ್ತ ಶಕದ ಅತ್ಯಂತ ಆದಿಯ ಗ್ರಂಥಗಳೆಂದು ಎಲ್ಲರಿಂದ ಸ್ವೀಕೃತವಾಗಿವೆ. "**ತಿರುಕ್ಕುರಲ್**" ಗ್ರಂಥವು ಜೈನರ ಸಾಹಿತ್ಯ ಕೃತಿಯೆಂದೂ ''**ನಾಲದಿಯಾರ್**'' ದಿಗಂಬರ ಪಂಥದ

ಜೈನಗುರುಗಳ ಸಾಹಿತ್ಯಕೃತಿಯೆಂದೂ ಸ್ವೀಕರಿಸಲ್ಪಟ್ಟಿವೆ. ಮಹಾವೀರರು ಸಾರಿದ ಜೈನಧರ್ಮವು ಕ್ರಿಸ್ತ ಪೂರ್ವ ನಾಲ್ಕನೇ ಶತಮಾನದಷ್ಟು ಹಿಂದೆಯೇ ತಮಿಳು ಜನರ ಧಾರ್ಮಿಕಭಾವನೆಯ ಮೇಲೆ ತುಂಬ ಪ್ರಭಾವ ಬೀರಿತ್ತೆಂಬುದು ಎಲ್ಲರೂ ಒಪ್ಪಿದ ವಿಷಯವಾಗಿರುತ್ತದೆ.

ಪವಿತ್ರ ಕುರಲ್ ಗ್ರಂಥವನ್ನು ಬರೆದ ತಿರುವಲ್ಲೂರ್ ಇಂದಿನ ಮದ್ರಾಸಿನ ಮೈಲಾಪುರದಲ್ಲಿ ವಾಸವಾಗಿದ್ದನೆಂದೂ, ಕ್ರಿ. ಶ. ಎರಡನೇ ಶತಮಾನದವನೆಂದೂ (ಮೊದಲನೇ ಶತಮಾನವೆಂದು ಕೆಲವರನ್ನುತ್ತಾರೆ). ವೃತ್ತಿಯಲ್ಲಿ ನೆಯ್ಗೆಯವನಾಗಿದ್ದನೆಂದೂ ಕೇಳಬರುತ್ತದೆ ವಲ್ಲೂವರರೆಂದರೆ ನೀಚ ಜಾತಿಯವರು; ತಮಿಳುನಾಡಿನ ಅಸ್ಪೃಶ್ಯರ ಪುರೋಹಿತ ವರ್ಗಕ್ಕೆ ಸೇರಿದವರು. ಇದು ಒಂದು ಮತ.

ಕುರಲ್ ಗ್ರಂಥದಲ್ಲಿ ಸಮಾಜದ ಬೇರೆ ಬೇರೆ ಪಂಥಗಳ ಗುಣ ಮತ್ತು ನಡತೆಗಳ ವಿವರಣೆಯೇ ಪ್ರಧಾನವಾಗಿದೆ. ಗುಣ, ಸಂಪತ್ತು ಮತ್ತು ಪ್ರೇಮ (ಸಂಸ್ಕೃತದಲ್ಲಿ ಇವುಗಳನ್ನೇ ಧರ್ಮ, ಅರ್ಥ ಮತ್ತು ಕಾಮ ಎಂದು ಸಂಬೋಧಿಸಿರುತ್ತಾರೆ ಮತ್ತು ತಮಿಳು ಭಾಷೆಯಲ್ಲಿ ಅರಾಮ್, ಪೊರಲ್ ಮತ್ತು ಇಂಬಮ್ ಎಂದು ಕರೆಯುವರು) ಎಂಬ ಮೂರು ಮುಖ್ಯ ವಿಭಾಗಗಳಿಂದೊಡಗೂಡಿ ಸುಮಾರು ೧೩೩೦ ವಚನಗಳನ್ನಾವರಿಸಿಕೊಂಡಿದೆ. ಇಂದು ಕುರಲ್ ಎಂಬುದು ಒಂದು ಧರ್ಮಭಂಡಾರವಾಗಿಯೇ ಲೋಕಮಾನ್ಯವಾಗಿದೆ. ಅದರಲ್ಲಿ ಅರ್ವಾಚೀನ ಹಾಗೂ ಪ್ರಾಚೀನ ತಮಿಳು ಸಾಹಿತ್ಯದ ವಿಪುಲ ಜ್ಞಾನಸಂಗ್ರಹವು ಅಡಕವಾಗಿದೆ. ಹಲವು ಮಂದಿ ಇಂಗ್ಲಿಷ್ ಸಾಹಿತಿಗಳು ಅದನ್ನು ಆಂಗ್ಲಭಾಷೆಗೆ ಪರಿವರ್ತಿಸಿದ್ದಾರೆ. ಅವುಗಳಲ್ಲಿ ವಿಶೇಷ ಆದರಕ್ಕೆ ಪಾತ್ರವಾದ ಆಂಗ್ಲ ತರ್ಜುಮೆಗಳೆಂದರೆ ಡಾ| ಜಿ. ಯು. ಪೋಪ್ಲಿ, ಡಾ| ಜೆ. ಲಾಜರಸ್, ವಿ. ವಿ. ಎಸ್. ಅಯ್ಯರ್ ಮತ್ತು ಚಕ್ರವರ್ತಿ ರಾಜಗೋಪಾಲಾಚಾರಿಯವರು ಬರೆದುವುಗಳು.

ಕೆಲವು ತಮಿಳು ಪಂಡಿತರು ವಲ್ಲೂವರನನ್ನು ಜೈನಗುರುವೆಂದು ಸನ್ಮಾನಿಸಿದ್ದಾರೆ.* ದಿವಂಗತ ಪ್ರೊಫೆಸರ್ ಶೇಷಗಿರಿ ಶಾಸ್ತ್ರಿಯವರು ಆ

---

*ತಿರುಕ್ಕುರಲ್ ಗ್ರಂಥವನ್ನು ಶ್ರೀ| ಕುಂದ ಕುಂದಾಚಾರ್ಯರು ರಚಿಸಿದ್ದೆಂದು ಆಧಾರಭೂತವಾಗಿ ಬರೆದು ಒಂದು ಬೃಹದ್ಗ್ರಂಥವನ್ನು ಪ್ರೊಫೆಸರ್ ಎ. ಚಕ್ರವರ್ತಿಗಳು ಪ್ರಕಟಿಸಿರುತ್ತಾರೆ—ಲೇಖಕ.

ಕವಿಯು ಓರ್ವ ಅರ್ಹಂತರ ಅನುಯಾಯಿ ಎಂದಿದ್ದರು. ಕುರಲ್ ಗ್ರಂಥದಲ್ಲಿ ಬರುವ "ಮಲರಮಿಸೈ ಯೆಜಿನನ್" ಮತ್ತು "ಯೆಂಗು ನಾಥನ್" ಎಂಬಿತ್ಯಾದಿ ಉಲ್ಲೇಖಗಳಿಂದ ಅದನ್ನು ಬರೆದ ಕವಿಯು ಜೈನಧರ್ಮದ ಅನುಯಾಯಿ ಇರಬೇಕೆಂದು ಸ್ಪಷ್ಟ ತಿಳಿಯಬಹುದಾಗಿದೆ ಎಂಬುದಾಗಿ ಪ್ರೊಫೆಸರ್ ಎಮ್. ಎಸ್. ರಾಮಸ್ವಾಮಿ ಅಯ್ಯಂಗಾರರು ಅಭಿಪ್ರಾಯಪಟ್ಟಿರುತ್ತಾರೆ. "ಮಲರ ಮಿಸೈ ಯೆಜಿನನ್" ಎಂದರೆ "ತಾವರೆಯಲ್ಲಿ ನಡೆಯುವವನು" ಎಂಬರ್ಥ. ಈ ಉಲ್ಲೇಖವು ಸಾಮಾನ್ಯವಾಗಿ ಅರ್ಹಂತರಿಗೆ ಸಂಬಂಧಿಸಿದುದು. ಇನ್ನು "ಯೆಂಗು ನಾಥನ್" ಎಂದರೆ "ಎಂಟು ಗುಣಗಳಿಂದೊಡಗೂಡಿದವನು" ಎಂಬುದು ವಿಶೇಷವಾಗಿ ಜಿನೇಶ್ವರರಿಗೆ ಸಂಬೋಧಿಸಿದುದು. ಜೈನಧರ್ಮದಲ್ಲಿ ಹೇಳಿರುವಂತೆ ಪರಮಾತ್ಮನು ಈ ಎಂಟು ಗುಣಗಳಿಂದೊಡಗೂಡಿರುತ್ತಾನೆ. ಇನ್ನು ಕುರಲ್ ಜೈನ ಮೂಲ ಗ್ರಂಥವೆಂಬುದಕ್ಕೆ ಮೂರನೇ ಸಾಧಾರಭೂತ ವಿಮರ್ಶೆ "ನೀಲಕೇಶಿ" ಗ್ರಂಥದ ವಿಮರ್ಶಕರಿಂದ ಸಿಗುತ್ತದೆ. ಅವರು "ಕುರಾಲ್ ಎಮ್ಮೊತ್ತು" ("ಕುರಾಲ್ ನಮ್ಮ ಸ್ವಂತ ಧರ್ಮ ಗ್ರಂಥ") ಎಂದಿರುವರು. ಜೈನರು ವಲ್ಲೂವರನು ತಮ್ಮ ಪಂಥಕ್ಕೇನೆ ಸೇರಿದವನೆಂಬ ವಿಶ್ವಾಸ ತಾಳಿಕೊಂಡಿದ್ದರೆಂಬುದಕ್ಕೆ ಇವು ಪ್ರಬಲ ಸಾಕ್ಷ್ಯವಾಗಿವೆ.

ಜೈನಧರ್ಮದಲ್ಲಿ ಮತ್ತು ಸಂಸ್ಕೃತಿಯಲ್ಲಿ ಅತ್ಯಂತ ಉತ್ಕೃಷ್ಟವಾದುದನ್ನೆ ಆರಿಸಿ ತನ್ನ ಗ್ರಂಥದಲ್ಲಿ ವಲ್ಲೂವರ್ ಕವಿಯು ವ್ಯಾಖ್ಯಾನಿಸಿದ್ದಾನೆಂಬುದು ನಿರ್ವಿವಾದ.

ಕುರಲ್

೧. ಧರ್ಮ

ಧರ್ಮಕ್ಕಿಂತ ಅತಿಶಯವಾದ ಸಂಪತ್ತು ಬೇರೊಂದಿಲ್ಲ; ಅದನ್ನು ಮರೆಯುವದರಷ್ಟು ದುರಾದೃಷ್ಟವೂ ಬೇರೊಂದಿರಲಾರದು.

ಧರ್ಮವನ್ನು ಮರೆಯುವುದೆಂದರೆ ಧರ್ಮದಲ್ಲಿ ಹೇಳಿದಂತಹ ಕರ್ತವ್ಯಗಳನ್ನು ಪಾಲಿಸದಿರುವುದಾಗಿದೆ.

ಧರ್ಮಪಥವನ್ನು ಬಿಡದೆ ನಿಮ್ಮ ಶಕ್ತಿ ಮತ್ತು ಸಂಪತ್ತು ಕೊಂಡೊಯ್ಯುವಷ್ಟು ದೂರಕ್ಕೆ ಮುನ್ನಡೆಯಿರಿ.

ಧೈರ್ಯದ ಹಿಡಿತವು ಒಂದಿಷ್ಟು ಸಡಿಲವಾಗದಂತೆ ಪ್ರತಿಯೊಂದು ವಿಷಯವನ್ನು ಪ್ರಯೋಗಕ್ಕೆ ಅನುಕೂಲವಾಗುವ ಮಟ್ಟಕ್ಕೆ ತರುವ ವಿಶಿಷ್ಟ ಮಾರ್ಗವಿದು.

ಮನಸ್ಸನ್ನು ದುರಾಲೋಚನೆಗಳಿಂದ ದೂರವಿರಿಸಿ. ಇದರಲ್ಲೇ ಎಲ್ಲ ಧರ್ಮ ಅಡಕವಾಗಿದೆ. ಉಳಿದುದೆಲ್ಲ ಶಬ್ದ ಮತ್ತು ಪ್ರದರ್ಶನದ ರೂಪದಲ್ಲಿದೆ.

ಕ್ರಿಯೆಯು ಶುದ್ಧವಿರಬೇಕಾದರೆ ಭಾವನೆ ಶುದ್ಧವಿರಬೇಕು. ಮನಸ್ಸನ್ನು ಕೆಟ್ಟ ಆಲೋಚನೆಗಳಿಂದ ದೂರವಿರಿಸಿಕೊಳ್ಳುವುದು ಧಾರ್ಮಿಕ ಜೀವನದ ಉದ್ದೇಶವಾಗಿದೆ. ಮತ್ತು ಇದು ಮೌನದಲ್ಲಿ ನಡೆದುಹೋಗುತ್ತದೆ. ಬಾಹ್ಯ ಪ್ರದರ್ಶನಗಳೆಲ್ಲ ಶಬ್ದಾಡಂಬರ ಮತ್ತು ನಟನೆ ಮಾತ್ರ.

ನಿಜವಾದ ಧಾರ್ಮಿಕ ಜೀವನವು ಈ ನಾಲ್ಕು ವಿಷಯಗಳನ್ನು ತ್ಯಜಿಸುವುದರಿಂದ ಪ್ರಾಪ್ತವಾಗುತ್ತದೆ. ಆ ನಾಲ್ಕು ವಿಷಯ ಯಾನೆ ವ್ಯಸನಗಳೆಂದರೆ ಅಸೂಯೆ, ವಿಲಾಸದ ಆಕಾಂಕ್ಷೆ, ಕೋಪ ಮತ್ತು ಕೆಟ್ಟ ಮಾತುಗಳು.

ಒಳ್ಳೆಯದನ್ನು ಮುಂದೆ ಮಾಡುವೆನೆಂದು ಒತ್ತಟ್ಟಿಗಿಡಬೇಡಿ. ಈಗಲೇ, ದೇಹದಲ್ಲಿ ಚೈತನ್ಯ ಮತ್ತು ಶಕ್ತಿಗಳು ಇರುವಾಗಲೇ ಧಾರ್ಮಿಕ ಜೀವನವನ್ನು ಜೀವಿಸಿರಿ. ಉಳಿದುದೆಲ್ಲ ನಿಷ್ಪ್ರಯೋಜಕ ಮತ್ತು ಕ್ಷಣಿಕವಾದರೆ ಅದೊಂದೇ ಶಾಶ್ವತ ಆಸರೆಯಾಗುವುದು.

ಒಳ್ಳೆಯ ನಡತೆಯಿಂದ ದೊರೆಯುವ ಆನಂದವೇ ನಿಜವಾದ ಸುಖವಾಗಿರುತ್ತದೆ. ಇತರ ವಿಲಾಸಗಳೆಲ್ಲ ನೋವಿಗೆ ಮತ್ತು ನಾಚಿಕೆಗೆ ಕಾರಣವಾಗಿವೆ.

ದುರ್ನಡತೆಯಿಂದ ಲಭ್ಯವಾದ ಸಂತೋಷವು ಮರುಕ್ಷಣದಲ್ಲೇ ದುಃಖವಾಗಿ ಪರಿಣಮಿಸುವುದು. ಆದುದರಿಂದ ಒಳ್ಳೆಯ ನಡತೆಯೇ ಸರಿಯಾದ ಮಾರ್ಗ ಮತ್ತು ವಿವೇಕಪೂರ್ಣವಾಗಿರುತ್ತದೆ.

೨. ಒಳ್ಳೆಯ ಗೃಹಸ್ಥ

ನಿಜವಾದ ಗೃಹಸ್ಥನು ಇತರರ ಎಲ್ಲ ಕರ್ತವ್ಯಗಳೂ ಸರಿಯಾಗಿ ಪೂರೈಸುವಂತೆ ನೆರವಾಗುತ್ತಾನೆ.

ವಿವಾಹವಾಗದ ಬ್ರಹ್ಮಚಾರಿ ವಿದ್ಯಾರ್ಥಿಯು ಜೀವನದ ಸುಖ ಸಂತೋಷಗಳನ್ನು ತ್ಯಜಿಸಿ ಕಾನನಕ್ಕೆ ಹೋಗುವುದು, ಸನ್ಯಾಸಿಗಳು ತಮ್ಮ ಸನ್ಯಾಸದೀಕ್ಷೆಯನ್ನು ಅಡ್ಡಿ-ಆತಂಕಗಳಿಲ್ಲದೆ ಸಾಗಿಸುವುದು ಇತರ ಹಲವು ಜನರು ಗೃಹಸ್ಥಾಶ್ರಮಿಗಳಾಗಿ ಜೀವಿಸಿರುವುದರಿಂದಲೇ. ಆದುದರಿಂದ ಗೃಹಸ್ಥಾಶ್ರಮಿಗಳಾಗಿ ಜೀವಿಸುವ ಸಂಸಾರಿಗಳು ವಿಲಾಸವೈಭವಕ್ಕೆ ಶರಣುಹೋದ ಸ್ವಾರ್ಥಿಗಳು, ಇತರ ಸನ್ಯಾಸಿಗಳು ಮಾತ್ರ ನಿಸ್ವಾರ್ಥಿಗಳು, ಎಂದು ತಿಳಿಯಬಾರದು. ಈ ಪ್ರಪಂಚದ ಲೌಕಿಕ ವ್ಯವಹಾರ ತ್ಯಜಿಸಿದವರಿಗಾಗಿ ಗೃಹಸ್ಥಾಶ್ರಮಿಯು ದುಡಿಯುತ್ತಿದ್ದಾನೆಂಬುದಾಗಿ ತಿಳಿಯಬೇಕು.

ಪ್ರೇಮ ಮತ್ತು ಒಳ್ಳೆಯ ನಡತೆ ಅದು ಗೃಹಸ್ಥಾಶ್ರಮಿಯ ಜೀವನಕ್ಕೆ ಮೆರುಗು ಮತ್ತು ಉದ್ದೇಶಪೂರ್ತಿಯ ಹೊಳಪು ಕೊಡುತ್ತವೆ.

ಪ್ರೇಮ ಮತ್ತು ಧರ್ಮಗಳಿಂದ ಕೂಡಿದ್ದರೆ ತಾನೆ ಸಂಸಾರ ಜೀವನವು ಸುಂದರ ಮತ್ತು ಸುಶೋಭಿತವಾಗುವುದು. ಪ್ರೇಮವು ಅದನ್ನು ಸುಂದರವನ್ನಾಗಿ ಮಾಡುವುದಾದರೆ ಧರ್ಮವು ಅದರ ಉದ್ದೇಶ ಪೂರ್ತಿಮಾಡುತ್ತದೆ.

ಧರ್ಮದಲ್ಲಿ ಹೇಳಿದ ಮಾರ್ಗದಲ್ಲಿ ಸಂಸಾರಜೀವನ ಸಾಗಿಸುತ್ತಿರುವವನಿಗೆ ಕಾನನಕ್ಕೆ ಹೋಗಿ ತ್ಯಾಗಜೀವನ ನಡೆಸುವಂಥದ್ದೇನೂ ಉಳಿಯುವುದಿಲ್ಲ.

ಧರ್ಮದ ಮಹತ್ವಾಕಾಂಕ್ಷೆಯುಳ್ಳ ಎಲ್ಲ ತರಗತಿಯವರಲ್ಲಿ ಕ್ರಮಬದ್ಧವಾದ ಸಂಸಾರಜೀವನ ನಡೆಸಿಕೊಂಡಿರುವವನೇ ಅತಿ ಶ್ರೇಷ್ಠನು.

ಮಾಡಬೇಕಾದುದನ್ನು ಚ್ಯುತಿಯಿಲ್ಲದೆ ಮಾಡಿ, ಧರ್ಮಪಂಥದಿಂದ ಬಾಹಿರನಾಗಿ ಜೀವನ ನಡೆಸುವ ಗೃಹಸ್ಥಾಶ್ರಮಿಯ ತಪಸ್ಸು, ಅರಣ್ಯದಲ್ಲಿ ಹಸಿವು ನೀರಡಿಕೆಗಳನ್ನು ತ್ಯಜಿಸಿ ಸಾಧನೆಮಾಡುವ ತಪಕ್ಕಿಂತಲೂ ಶ್ರೇಷ್ಠವಾದುದು.

ಈ ಪ್ರಪಂಚದಲ್ಲಿ ಯಾವ ರೀತಿಯಲ್ಲಿ ಜೀವನ ನಡೆಸಿಕೊಂಡಿರಬೇಕೋ ಆ ರೀತಿಯ ಜೀವನ ಯಾರು ನಡೆಸುತ್ತಾನೋ ಅವನು ಸ್ವರ್ಗದಲ್ಲಿಯ ದೇವತೆಗಳಿಗೆ ಸಮಾನನಾಗುತ್ತಾನೆ.

೩. ಜೀವನ ಸಂಗಾತಿ

ಗೃಹಸ್ಥಾಶ್ರಮಿಯ ಜೀವನದಲ್ಲಿ ಸಮಪಾಲಿನ ಕರ್ತವ್ಯ ಭಾಗವಹಿಸು ವವಳು ಮತ್ತು ಅವನ ಸಂಪಾದನೆಯ ಮಟ್ಟಕ್ಕೆ ತನ್ನ ಆವಶ್ಯಕತೆಗಳನ್ನು ನಿಲುಕಿಸಿಕೊಳ್ಳುವಂತಹಳೇ ನಿಜವಾದ ಜೀವನಸಂಗಾತಿಯು.

ಮನೆಗೆ ಬಂದ ಮಡದಿ ಕುಟುಂಬದ ಪಂಕ್ತಿಯಲ್ಲಿ ಸಾಂಸ್ಕೃತಿಕ ದೃಷ್ಟಿ ಹಾಗು ಆರ್ಥಿಕ ದೃಷ್ಟಿ ಹೊಂದಿಕೊಂಡು ಬಾಳಲು ಕಲಿತರೆನೇ ಅಂತಹ ಸಂಸಾರದಲ್ಲಿ ಸುಖಸಂತೋಷಗಳು ಕೂಡಿಬಂದಾವು. ಇಲ್ಲದೆ ಹೋದರೆ ಸಂಸಾರ ನೀರಸವಾಗಬಹುದು.

ಗೃಹಸ್ಥಿತಿಗೆ ತಕ್ಕುದಾದ ಕರ್ತವ್ಯಗಳನ್ನು ಪೂರೈಸುವ ಗುಣಗಳಿಲ್ಲದ ಪತ್ನಿಯಿಂದ ಸಂಸಾರದಲ್ಲಿ ನೆಮ್ಮದಿ ಸಿಗುವಂತಿಲ್ಲ. ಮನೆಯ ಒಡತಿಯಲ್ಲಿ ಮುಖ್ಯವಾಗಿ ಇರಬೇಕಾದ ಈ ಗುಣಗಳೇ ಇಲ್ಲವೆಂದರೆ ಆ ಸಂಸಾರದಲ್ಲಿ ವಿಪುಲ ಐಶ್ವರ್ಯ ಮತ್ತು ಇತರ ಸಾಧನಗಳಿದ್ದು ಪ್ರಯೋಜನ ಸಿಗಲಾರದು.

ಗಂಡನಲ್ಲಿದ್ದ ಗುಣಾತಿಶಯಗಳಿಂದ ಈ ಕೊರತೆ ತುಂಬುವಂತಿಲ್ಲ.

ಜೀವನಸಂಗಾತಿಯಲ್ಲಿರಬೇಕಾದ ಗುಣನಡತೆಗಳು ಮನೆಯ ಒಡತಿ ಯಲ್ಲಿದ್ದುವೆಂದರೆ ಬೇರೆ ಏನೂ ಬೇಕಾಗಿಲ್ಲ. ಅಂತಹ ಗುಣಗಳು ಇಲ್ಲ ವೆಂದಾದರೆ ಬೇರೆ ಯಾವುದರಿಂದಲೂ ಲಾಭವಿಲ್ಲ.

ಜೀವನದ ಸಂಗಾತಿಯು ವಿಧೇಯಳೂ ಪತಿಭಕ್ತಿಪರಾಯಣಳೂ ಆಗಿದ್ದಾಳೆಂದರೆ ಅದಕ್ಕಿಂತ ಅತಿಶಯವಾದ ಬೇರೆ ಭಾಗ್ಯ ಏನು ಬೇಕು?

ನಿಜವಾದ ಪತ್ನಿಯು ಮುಂಜಾನೆ ಎದ್ದೊಡನೆ ದೇವರನ್ನು ಸ್ಮರಿಸುವು ದಿಲ್ಲ. ಅವಳು ತನ್ನ ಭಕ್ತಿಪೂಜಾದಿಗಳನ್ನು ತನ್ನ ಆರಾಧ್ಯದೇವನಾದ

ಪತಿಗೆ ಒಪ್ಪಿಸುತ್ತಾಳೆ. ಅಷ್ಟರಲ್ಲೇ ಸಂತುಷ್ಟಳಾಗುತ್ತಾಳೆ. ಅಂತಹಳ ಆಜ್ಞೆಯಾದರೆ ಮೋಡಗಳು ಕೂಡ ಮಣಿದು ವೃಷ್ಟಿ ಸುರಿಸಬಲ್ಲುವು.

ಭಜಕನು ತಾನು ಪ್ರೀತಿಸುವ ಇಲ್ಲವೆ ಮೆಚ್ಚುವ ಯಾವುದೇ ಪೂಜ್ಯ ವಸ್ತುವಿನಲ್ಲಿ ಇಲ್ಲವೆ ವ್ಯಕ್ತಿಯಲ್ಲಿ ಪರಮಾತ್ಮ ಸಾಕ್ಷಾತ್ಕಾರವನ್ನು ಕಾಣ ಬಲ್ಲನು. ಗಂಡನನ್ನು ಪೂಜಿಸುವುದೆಂದರೆ ಪರಮಾತ್ಮನ ಅಲಕ್ಷ್ಯವೆಂದಾ ಗುವುದಿಲ್ಲ.

ಸ್ತ್ರೀಯರ ಮೇಲೆ ಭೌತಿಕ ನಿರ್ಬಂಧಗಳನ್ನಿಟ್ಟು ಸಾಧ್ಯಮಾಡಿ ಕೊಂಡಂತಹ ಶುದ್ಧತೆ ಇಲ್ಲವೆ ಪಾವಿತ್ರ್ಯದಿಂದೇನ ಫಲ? ಅವರ ಸ್ವಂತ ಆತ್ಮಸಾಕ್ಷಿಯೇ ಯೋಗ್ಯ ಕಾವಲುಕಣ್ಣು.

೪. ಮಕ್ಕಳು

ಮನುಷ್ಯನಿಗೆ ಲಭ್ಯವಾಗಬಹುದಾದ ಸೌಭಾಗ್ಯಗಳಲ್ಲಿ ಯೋಗ್ಯ ಮಕ್ಕಳನ್ನು ಪಡೆಯುವಂತಹ ಸೌಭಾಗ್ಯ ಸಂತೋಷಾತಿಶಯ ಬೇರೊಂದಿಲ್ಲ.

ಒಬ್ಬನ ಸ್ವಂತ ಮಗುವು ತನ್ನ ಪುಟ್ಟ ಕೈಗಳನ್ನು ಮುಳುಗಿಸಿದ ಪಾಯಸವು ಸ್ವರ್ಗಲಭ್ಯವಾದ ಅಮೃತಕ್ಕಿಂತಲೂ ಮಧುರವಾದುದು.

ವೇಣು ಮತ್ತು ವೀಣಾನಾದಗಳನ್ನು ಮುಕ್ತಕಂಠನಾಗಿ ಹೊಗಳು ವವರು ಇದ್ದಾರೆ. ಮಾತನಾಡಲು ಕಲಿಯುವ ಮುದ್ದು ಮಗುವಿನ ತೊದಲ್ನುಡಿ ಇವೆರಡಕ್ಕಿಂತ ಮಧುರವಾದುದು.

ತಂದೆಯಾದವನೊಬ್ಬನು ತನ್ನ ಮಗುವಿಗಾಗಿ ಕೂಡಿಸಿಡಬಹುದಾದ ಅತ್ಯಮೂಲ್ಯ ಪಿತ್ರಾರ್ಜಿತ ಸೊತ್ತೆಂದರೆ ಯೋಗ್ಯ ಸಾಹಿತಿಗಳಲ್ಲಿ ಗೌರವ ಪೂರ್ಣವಾದ ಸ್ಥಾನಹೊಂದುವಂತೆ ಯೋಗ್ಯ ಶಿಕ್ಷಣವನ್ನು ಆ ಮಗುವಿಗೆ ಒದಗಿಸುವುದಾಗಿದೆ.

ಮಕ್ಕಳನ್ನು ಸಾಕಿಸಲಹುವ ಮಾತಾಪಿತರು, ಅವರ ಸುಖಸಂತೋಷ ಗಳಿಗೆ ಸಂಪತ್ತಿಗಿಂತ ಶಿಕ್ಷಣವು ಹೆಚ್ಚಿನ ಆಶಯ ಒದಗಿಸುವುದೆಂಬುದನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕು.

ತನ್ನ ಮಗನ ಕುರಿತು ಇತರರು ಪ್ರಶಂಸಿಸಿದ ಮಾತುಗಳನ್ನು ಕೇಳುವಾಗ, ಆ ಮಗುವನ್ನು ಹೆತ್ತ ತಾಯಿಗೆ ಅವನು ಹುಟ್ಟಿದ ದಿನ ಆದ ಆನಂದಕ್ಕಿಂತ ಹೆಚ್ಚಿನ ಸಂತೋಷವಾಗುವುದು.

ಮಗನು ತನ್ನ ಮಾತಾಪಿತರಿಗೆ ಯೋಗ್ಯ ರೀತಿಯಲ್ಲಿ ಋಣ ತೀರಿಸಲು ಬಯಸುವುದಿದ್ದರೆ, "ಅಂತಹ ಗುಣಶೀಲನಾದ ಮಗನನ್ನು ಹೊಂದಬೇಕಾದರೆ ಆ ತಂದೆಯ ಸುಕೃತ ಅಮೋಘವಿರಬೇಕು" ಎಂದು ಇತರರು ಆಡಿಕೊಳ್ಳುವಂತೆ ತನ್ನ ಗುಣನಡತೆಗಳಿಂದ ಸಾಧಿಸಬೇಕು.

೫. ಮಮತೆ

ಮಮತೆಯ ಭಾವನೆಯಿಲ್ಲದವರು ತಮಗೇನೆ ತಾವು ಹೆಚ್ಚಿನ ಮಹತ್ವ ಕೊಟ್ಟಂತೆ ತೋರುತ್ತದೆ. ವಾತ್ಸಲ್ಯದಿಂದ ತುಂಬಿದ ಕರುಣಾಹೃದಯರು ತಮ್ಮ ಆಸ್ತಿಗಳಲ್ಲಿ ಕೂಡ ಇತರರಿಗೇನೆ ಸೇರಿದವರಿರುತ್ತಾರೆ.

ಪ್ರೀತಿಯು ಅವರನ್ನು ಬಾಹ್ಯ ಸಜೀವ ಜಗತ್ತಿನ ಹೆಮ್ಮೆಯ ಆಸ್ತಿಯನ್ನಾಗಿ ಮಾಡುತ್ತದೆ.

ದೇಹವೆಂಬ ಹೊರೆಯನ್ನು ಹೊತ್ತ ಆತ್ಮವು ಉಳಿಸಿಕೊಂಡ ಸಂತೋಷವೆಂದರೆ ಮಾನವ ಪ್ರೇಮದ ಅನುಭವವಾಗಿರುತ್ತದೆ, ಎಂಬುದಾಗಿ ಬಲ್ಲವರು ಹೇಳುತಿದ್ದಾರೆ.

ಆತ್ಮವು ಮಾಂಸ ಮತ್ತು ರಕ್ತದಿಂದೊಡಗೂಡಿದ್ದರೆ ಮಾತ್ರ ಮಾನವ ಪ್ರೇಮದ ಭಾವನೆಯನ್ನು ಅನುಭವಿಸುವುದು ಸಾಧ್ಯ ಎಂದ ಮೇಲೆ, ಮಮತೆಯ ಆ ಅನುಪಮ ಅನುಭವ ಪಡೆಯುವುದರ ಸಲುವಾಗಿಯಾದರೂ ಪ್ರಾಪಂಚಿಕ ಕಷ್ಟಪರಂಪರೆಗಳನ್ನು ಅನುಭವಿಸಲು ಸಿದ್ಧರಾಗಬೇಕು.

ಪ್ರಾಪಂಚಿಕ ಜೀವನದಲ್ಲಿ ಈ ಒಂದು ಅನುಭವದ ಸುಖ ಪಡೆಯಲಿಕ್ಕಾಗಿಯೇ ಆತ್ಮವು ಮಾಂಸ ಮತ್ತು ರಕ್ತಗಳ ಆವರಣ ಹೊದ್ದುಕೊಂಡು ಪ್ರಪಂಚದಲ್ಲಿ ಜನ್ಮವೆತ್ತಲು ಬಯಸುತ್ತದೆ.

ಮಮತೆ ಎಂಬುದು ಭಕ್ತಿಗೆ ತರಬೇತಿ. ಭಕ್ತಿಯಿಂದ ದಿವ್ಯಜ್ಞಾನವು, ನಮ್ಮೆಲ್ಲರ ಪ್ರಯತ್ನಗಳ ಮುಖ್ಯ ಗುರಿಯಾಗಿರುವ ಮೋಕ್ಷವು ತಾನಾಗಿ ಲಭ್ಯವಾಗುತ್ತದೆ.

ಸ್ವರ್ಗಪಥವು ಸುಖಸಂಪತ್ತುಗಳಿಂದ ಅತಿಶಯವಾದ ಆನಂದದಿಂದ ತುಂಬಿಕೊಂಡಿರುವುದು. ಕ್ರಮಬದ್ಧವಾದ ಸಂಸಾರಿಕ ಜೀವನ ನಡೆಸಿಯೇ ಅದನ್ನು ಹೊಂದಬಹುದಾಗಿದೆ.

ಬ್ರಹ್ಮಚರ್ಯ, ತಪಸ್ಸು ಇವೇ ಮೊದಲಾದ ಕಠಿಣ ಸಿದ್ಧಿಗಳಿಗಿಂತ ಇದು ಅತಿ ಸುಲಭ.

ಮಮತಾಪೂರ್ಣ ಹೃದಯವು ಧರ್ಮಪಥದಲ್ಲಿ ಮಾತ್ರ ಅಗತ್ಯ ಎಂಬ ತಪ್ಪು ತಿಳುವಳಿಕೆಯು ಅಪೂರ್ಣ ಜ್ಞಾನಹೊಂದಿದವರಲ್ಲಿರುತ್ತದೆ. ಇಲ್ಲ, ಪ್ರೀತಿಯು ಯೋಧನೊಬ್ಬನ ಸಾಹಸಪೂರ್ಣ ಕೃತ್ಯಗಳನ್ನು ಹುರಿದುಂಬಿಸಬಲ್ಲುದು.

ಅತ್ಯಂತ ಧೈರ್ಯಶಾಲಿಯಾದ ಯೋಧನು ಅತೀವ ಕರುಣಾಹೃದಯನಿರುತ್ತಾನೆಂಬುದನ್ನು ಮರೆಯಬಾರದು. ಕೋಪ, ವೈರತ್ವಗಳನ್ನು ಗೆದ್ದು, ತಾನು ಸತ್ಕರ್ಮಗಳನ್ನು ಆಚರಿಸುವುದು ಮಾತ್ರವಲ್ಲ, ಇತರರು ಮಾಡಿದ ತಪ್ಪುಗಳನ್ನು ಗೆಲ್ಲಲು ಪ್ರೀತಿಯು ನೆರವಾಗುತ್ತದೆ.

ಪ್ರೀತಿಯ ಒಸರುಹರಿಯುದ ಹೃದಯ ಅದೊಂದು ಶುಷ್ಕ ಹೃದಯವೆನಿಸುತ್ತದೆ. ಪ್ರೀತಿಯಿಲ್ಲದಿದ್ದರೆ ಆತ್ಮಕ್ಕೆ ಅಧಾರ ಇಲ್ಲದಂತಾಗಿ ಅದು ಮುದುಡಿಕೊಳ್ಳುವುದು.

ಮಮತಾಪೂರ್ಣ ಹೃದಯವಿಲ್ಲದಲ್ಲಿ ಜೀವನವು ನೀರಸ. ಮರುಭೂಮಿಯಲ್ಲಿ ಸೂರ್ಯನ ಕಠಿನವಾದ ಬಿಸಿಲಿಗೆ ಕಮರಿಹೋದ ವೃಕ್ಷದಲ್ಲಿ ಹೊಸ ಎಲೆಗಳು ಹುಟ್ಟುವುದು ಸಾಧ್ಯವಿದೆಯೇ?

ಹೃದಯದಲ್ಲಿ ಮಮತೆ ಇಲ್ಲವೆ ಕೌಟುಂಬಿಕ ಬಾಹ್ಯಾಡಂಬರಗಳಿಂದ ಫಲವೇನು? ಬಾಹ್ಯದೃಷ್ಟಿಗೆ ಗೋಚರವಾಗುವ ಕಣ್ಣುಗಳು ಕುರುಡನಲ್ಲಿ, ಕಿವಿಗಳು ಕಿವುಡನಲ್ಲಿ ಇರುವಂತೆ. ಸಂಸಾರ ಜೀವನದಲ್ಲಿ ಕರುಣಾರಹಿತ ಹೃದಯವು ಜೀವನದ ಯಾವುದೇ ಉದ್ದೇಶವನ್ನು ಸಾಧಿಸಲಾರದು.

ಕರುಣಾಪೂರ್ಣ ಹೃದಯವಿಲ್ಲದ ಶರೀರವು ಚರ್ಮದಿಂದ ಸುತ್ತಿದ ಎಲುಬಿನ ರಾಶಿಗೆ ಸಮಾನ. ಪ್ರೀತಿಯಲ್ಲೇ ಜೀವನದ ರಹಸ್ಯವು ಅಡಕವಾಗಿದೆ.

ಜೀವನವು ನಡೆಯುತ್ತಿರುವುದು ಮಮತೆಯಲ್ಲಿ; ದೇಹದ ಶಾರೀರಿಕ ಚಟುವಟಿಕೆಗಳಿಂದಲ್ಲ.

೬. ಸಾರಳ್ಯ

ಸರಳ ಜೀವನ ನಡೆಸುವವನು ಸಂಪಾದಿಸಿದುದೆಲ್ಲ ಒಂದಿಷ್ಟು ಕಡಿಮೆಯಾಗದೆ ಅವನ ಮಕ್ಕಳಿಗೆ ದೊರೆಯುವುದು. ಅವರಿಗೆ ಯಾವೊಂದು ರೀತಿಯ ಅನಿಷ್ಟ ಇಲ್ಲವೆ ವಿಪತ್ತು ಬಾರದಂತೆ ಅದು ರಕ್ಷಿಸುವುದು.

ಸರಳವಾದ ರೀತಿಯಲ್ಲಿ ಸತ್ಪಥದಲ್ಲಿ ಆಚರಿಸಿದುದು ಯಾವಾಗಲೂ ನಷ್ಟವಾಗದು; ಸತ್ಪಥವನ್ನು ಬಿಟ್ಟು ಮೋಸ, ವಂಚನೆಗಳಿಂದ ಗಳಿಸಿದುದು ಗಳಿಸಿದಂತೆಯೇ ಹೋಗಬಹುದು. ಯಾವುದೇ ಗೃಹಸ್ಥದಲ್ಲಿ ತನ್ನ ನಂತರ ತನ್ನ ಮಕ್ಕಳಿಗೆ ಸುಖಸಂತೋಷಗಳು ಲಭಿಸಬೇಕೆಂಬ ಉನ್ನತ ಆಕಾಂಕ್ಷೆ ಇದ್ದೇ ಇರುತ್ತದೆ. ಸರಿಯಾದ ನಡತೆಯು ಇದನ್ನು ನಿಶ್ಚಯವಾಗಿಯೂ ಒದಗಿಸಲಾರದು. ಸಮಾಜವು ದೂಷಿಸುತ್ತಿರುವ ಅಕ್ರಮ ಯತ್ನಗಳಿಂದ ಗಳಿಸಿದ ಸಂಪತ್ತು ಅದು ಎಷ್ಟೇ ಅಪಾರವಿರಲಿ, ಶಾಶ್ವತವಲ್ಲ.

ಸತ್ಪಥವನ್ನು ಬಿಟ್ಟು ಗಳಿಸಿದುದರಲ್ಲಿ ದೋಷವೇನಿದೆ ಎಂದು ಹಲವು ಬಾರಿ ತೋಚುವುದುಂಟು. ಆದರೆ, ಈ ದುರಾಶೆಗೆ ಬಲಿಬೀಳಬೇಡಿ. ಅಂತಹ ಯೋಚನೆ ಮನಸ್ಸಿನಲ್ಲಿ ಮೂಡಿತೆನ್ನುವುದರೊಳಗೆ ಬಿಟ್ಟುಬಿಡಿ.

ಸರಳವಾದ ಜೀವನ ಯಾರು ನಡೆಸಿರುತ್ತಾರೆ, ಯಾರು ನಡೆಸಿಲ್ಲ ಎಂಬುದು ಅವರು ಬಿಟ್ಟುಹೋದ ಪೀಳಿಗೆಯ ವರ್ತನೆಯಿಂದ ತಿಳಿಯಬಹುದಾಗಿದೆ.

ನಿಮ್ಮ ಜೀವನವೇ ನಿಮ್ಮ ಮಕ್ಕಳಿಗೆ ಕನ್ನಡಿಯಂತಿದೆ. ಆದುದರಿಂದ ಮಕ್ಕಳು ಯೋಗ್ಯ ಗುಣವಂತರಾಗಿ ಬಾಳಬೇಕೆಂಬ ಇಚ್ಛೆಯಿದ್ದರೆ ಸತ್ಪಥದಲ್ಲಿ ನಡೆಯಲು ಮರೆಯಬೇಡಿ.

ನಿಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳು ಸತ್ಪಥವನ್ನು ಬಿಟ್ಟು ನಡೆಯುವ ಲಕ್ಷಣಗಳು ತೋರಿದೊಡನೆ ದೌರ್ಭಾಗ್ಯ ನಿಮ್ಮನ್ನು ಕಾಯುವುದೆಂದು ತಿಳಿಯತಕ್ಕುದು.

ಮನಸ್ಸಿನಲ್ಲಿ ಈ ರೀತಿಯ ಬದಲಾವಣೆಗಳುಂಟಾಗುವುದು, ಇತರರಿಗೆ ತಿಳಿಯುವ ಮೊದಲೇ ನಿಮಗೆ ತಿಳಿಯುವುವು. ಅದೊಂದು ಅಶುಭ ಸೂಚನೆಯೆಂದು ತಿಳಿದು ಎಚ್ಚರದಲ್ಲಿರಿ.

ಸತ್ಪಥದಲ್ಲಿ ಭದ್ರವಾಗಿ ನಡೆಯುವವನು ಕ್ರಮೇಣ ತನ್ನ ಪ್ರಾಪಂಚಿಕ ಭೋಗಭಾಗ್ಯಗಳನ್ನು ಕಳೆದುಕೊಳ್ಳಬಹುದಾದರೂ, ಅವನ ದಾರಿದ್ರ್ಯ ಜಗತ್ತಿನ ದೃಷ್ಟಿಯಲ್ಲಿ ಅವನ ಗೌರವಕ್ಕೆ ಒಂದಿಷ್ಟು ಕುಂದು ತಾರದು. ಸಮಾಜದಲ್ಲಿ ಅವನ ಸ್ಥಾನವು ಭದ್ರವಾಗಿರುವುದು.

ತಮ್ಮ ಹಿತಗಳನ್ನು ರಕ್ಷಿಸುವಂತೆ ಇತರರ ಹಿತಗಳನ್ನೂ ರಕ್ಷಿಸುವ ಧ್ಯೇಯವಿಟ್ಟುಕೊಂಡು ವ್ಯಾಪಾರಿಗಳು ಕಾರ್ಯತತ್ಪರರಾಗಬೇಕು- ಪ್ರಾಮಾಣಿಕತೆಯೇ ಅತ್ಯುತ್ತಮ ಧೋರಣೆ.

೭. ಆತ್ಮಸಂಯಮನ

ಸಂಸಾರವನ್ನು ತ್ಯಜಿಸಿದ ತ್ಯಾಗಿಯಂತೆ ಗೃಹಸ್ಥಾಶ್ರಮಿಗೂ ಆತ್ಮ ಸಂಯಮವು ಅತ್ಯವಶ್ಯವಿದೆ. ಕಾಮುಕತೆ, ಗರ್ವ ಮತ್ತು ಕ್ರೋಧಗಳಿಂದ ಹೇಗೆ ಪಾರಾಗಬಹುದೆಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆತ್ಮಸಂಯಮವು ಮನುಷ್ಯನನ್ನು ಪರಮಾತ್ಮನ ಬಳಿ ಕೊಂಡೊಯ್ಯು ವುದು. ಅದರ ಅಭಾವವು ಅಜ್ಞಾನದ ಅಂಧಕಾರಕೂಪಕ್ಕೊಯ್ಯುವುದು.

ಆತ್ಮ ಸಂಯಮದಷ್ಟು ಅಮೂಲ್ಯ ಸೊತ್ತು ಬೇರೊಂದಿಲ್ಲ. ಆದುದರಿಂದ ಸಂಪತ್ತು ಕಾಯುವಷ್ಟೇ ದಕ್ಷತೆಯಿಂದ ಅದನ್ನು ಕಾಯಲು ಮರೆಯಬೇಡಿ.

ನಮ್ರವಾಗಿರುವುದು ಪ್ರತಿಯೊಬ್ಬರಿಗೆ ಶೋಭಿಸುವುದು. ಆದರೆ, ಅಧಿಕ ಸಂಪತ್ತುಳ್ಳವರಿಗೆ ಅದು ಅತ್ಯಧಿಕ ಶೋಭೆಕೊಡುವುದು.

ವಿದ್ಯೆ, ಕುಲೀನತೆ ಮತ್ತು ಐಶ್ವರ್ಯ ಇವು ನಮ್ರತೆಯಿಂದ ಹೆಚ್ಚು ವವೇ ಹೊರತು ಯಾವ ಕಾಲಕ್ಕೂ ಕಡಿಮೆಯಾಗಲಾರವು.

ಎಂದು ಮನುಷ್ಯನು ಆತ್ಮಸಂಯಮದ ಜೀವನ ನಡೆಸಿ, ಆಮೆಯು ಹೊರಗಿನಿಂದ ಅಪಾಯದ ಸುಳಿವು ಅರಿತೊಡನೆ ತನ್ನ ಕಾಲುಗಳನ್ನು ಚಿಪ್ಪಿನೊಳಗೆ ಎಳೆಯುವಂತೆ ಪಂಚೇಂದ್ರಿಯಗಳನ್ನು ಅಂಕೆಯಲ್ಲಿಟ್ಟುಕೊಳ್ಳು ತ್ತಾನೋ ಅಂತಹವನು ಮುಂದೆ ಏಳು ಜನ್ಮಗಳಲ್ಲಿ ಪಾಪಕರ್ಮಗಳ ಕುರಿತು ನಿಶ್ಚಿಂತನಾಗುತ್ತಾನೆ.

ಬೇರೆ ಯಾವುದನ್ನು ಅಲಕ್ಷಿಸಿದರೂ ನಿಮ್ಮ ನಾಲಿಗೆಯನ್ನು ಅಂಕೆ ಯಲ್ಲಿಟ್ಟುಕೊಳ್ಳಲು ಮಾತ್ರ ಮರೆಯಬೇಡಿ. ಹಾಗೆ ತಪ್ಪಿದವರು ಮುಂದೆ ಅಪಾರ ಸಂಕಷ್ಟಕ್ಕೊಳಗಾಗುವರು.

ಎಂದರೆ ಜವರ ವಿಷಯಗಳಲ್ಲಿ ಸಂಯಮವನ್ನು ಸಡಿಲುಗೊಳಿಸ ಬೇಕೆಂಬ ಅರ್ಥವಲ್ಲ; ಆದರೆ ಅಜಾಗ್ರತೆಯ, ಅವಿವೇಕತನದ ಮಾತುಗಾರಿ ಕೆಯ ಅಪಾಯ ಆಗಾಗ್ಯೆ ಇದ್ದೇ ಇರುವದರಿಂದ ■ ಕುರಿತು ವಿಶೇಷ ಜಾಗ್ರತೆ ಅತ್ಯಗತ್ಯ.

ಸುಟ್ಟಗಾಯದ ನೋವು ಇಲ್ಲವೆ ವ್ರಣವು ವಾಸಿಯಾಗಬಹುದು— ಆದರೆ ನಾಲಿಗೆಯು ಎಚ್ಚರದಪ್ಪಿ ಮಾತನಾಡಿದುದರಿಂದ ಉಂಟಾದ ನೋವು ಯಾವತ್ಕಾಲವೂ ಮರೆಯುವಂತಹದಲ್ಲ. ಒಂದು ವಿಕಾರ ಮಚ್ಚೆಯಂತೆ ಅದು ಮನಸ್ಸಿನಲ್ಲಿ ಇದ್ದೇ ಇರುವದು.

ಹಲವು ಅನ್ಯಾಯಗಳನ್ನು ಮನುಷ್ಯರು ಮರೆಯಬಲ್ಲರು; ಆದರೆ ಅವಮಾನವನ್ನು ಮರೆಯುವುದು ಅಪರೂಪ.

ಮನಸ್ಸಿನಲ್ಲಿ ಉಕ್ಕುತ್ತಿರುವ ಕ್ರೋಧವನ್ನು ತಡೆಯುವ ಶಕ್ತಿ ಇರುವವನಲ್ಲಿ ಇತರ ಎಲ್ಲ ಗುಣಗಳು ತಾವೇ ತಾವಾಗಿ ಸೇರಿಕೊಳ್ಳುವುವು.

ಅಜಾಗ್ರತೆಯ ಮಾತು ಮತ್ತು ಅನಾವಶ್ಯಕ ಕ್ರೋಧಗಳಿಂದ ದೂರವಿರಲು ಗೃಹಸ್ಥಾಶ್ರಮಿಯು ಪ್ರಯತ್ನಿಸಲಿ. ಮತ್ತುಳಿದುದು ಅತ್ಯಂತ ಸುಲಭ.

೮. ಸಹನೆ

ತನ್ನನ್ನೆ ಗುದ್ದಲಿಯಿಂದ ಅಗೆಯುತ್ತಿರುವ ಮನುಷ್ಯನನ್ನು ಭೂಮಿಯು ಆದರಿಸುವುದಿಲ್ಲವೆ? ಆದುದರಿಂದ ನಮಗೆ ತಪ್ಪುಮಾಡುವವರ ಕಡೆಗೆ ನಾವೂ ಸಹನೆ ಪ್ರದರ್ಶಿಸಲು ಕಲಿಯಬೇಡವೆ?

ಯಾರಾದರೂ ನಿಮಗೆ ತಪ್ಪುಮಾಡಿದುದಿದ್ದರೆ ಅಲ್ಲಿಯೇ ಅದನ್ನು ತೀರಿಸಿಬಿಡಿ. ಆದರೆ, ಅದನ್ನು ಮರೆತಿರೆಂದರೆ ಇನ್ನೂ ಒಳ್ಳೆಯದು.

ತಪ್ಪುಮಾಡಿದವನ ಮೇಲೆ ಸೇಡು ತೀರಿಸಿಕೊಳ್ಳುವುದು ದೊಡ್ಡ ಸಾಹಸವಲ್ಲ. ಆದರೆ, ತಪ್ಪುಮಾಡಿದರೂ ಅದನ್ನು ಸಹಿಸಿಕೊಂಡಿರುವುದು ಆಚಂದ್ರಾರ್ಕ ಕೀರ್ತಿಯನ್ನು ತರುವುದು.

ಸೇಡಿನಿಂದ ಒಂದು ದಿನದ ಮಟ್ಟಿನ ಆನಂದ ಒದಗಬಹುದು. ಆದರೆ, ಸಹನೆಯು ಅಮರಸುಖವನ್ನು ತರಬಲ್ಲುದು.

ನೋವಿಗೆ ನೋವುಂಟುಮಾಡುವುದರಿಂದ ತಾತ್ಕಾಲಿಕವಾದ ತೃಪ್ತಿಯೊದಗಬಹುದು. ಆದರೆ, ಸಹನಾಶಕ್ತಿಯ ಫಲವು ಶಾಶ್ವತವಾಗಿಯೂ ಒಳ್ಳೆಯವರಿಂದ ಅಭಿನಂದನೆ ಪಡೆಯದಿರಲಾರದು. ಆದುದರಿಂದ ಕೇವಲ ಕ್ಷಣಿಕ ಸುಖದ ಆನಂದಕ್ಕಾಗಿ ಶಾಶ್ವತವಾದ ಸಂತೋಷವನ್ನು ತುಚ್ಛೀಕರಿಸುವುದು ಕೇವಲ ಮೂರ್ಖತನ.

ಸಹನೆಯಿಂದ ನಿಮ್ಮ ಬೆಲೆ ಹೆಚ್ಚುವುದು ಮಾತ್ರವಲ್ಲ, ದುರಹಂಕಾರವು ನಶಿಸಿಹೋಗುವುದು. ಸಹನೆಯು ಅಭಾವಸೂಚಕವಲ್ಲ. ತಪ್ಪು ಮಾಡಿದವನ ದುರಭಿಮಾನಕ್ಕೆ ಅದು ಪ್ರಬಲವಾದ ಆಘಾತ.

ಅವಮಾನದೆದುರು ಸಹನೆ ಪ್ರದರ್ಶಿಸುವವನು, ಆತನು ಗೃಹಸ್ಥಾಶ್ರಮಿಯಾಗಿದ್ದರೂ ಸನ್ಯಾಸಿಯಷ್ಟೆ ಶ್ರೇಷ್ಠನು.

ವಿರಕ್ತರು ಆಹಾರ ತ್ಯಜಿಸಿ ಕಠಿಣ ತಪಸ್ಸುಮಾಡುವರು. ಆದರೆ, ಅವಿವೇಕಿಗಳ ಹುಚ್ಚು ಅಭಿಯೋಗಗಳ ಮುಂದೆ ಸಹನಾಶಕ್ತಿ ಪ್ರದರ್ಶಿಸು ವವನು ಆ ನಿರಶನವ್ರತಧಾರಿ ಮತ್ತು ತಪಸ್ವಿಗಳಿಗಿಂತಲೂ ಶಕ್ತಿವಂತನು.

೯. ಅನಸೂಯೆ

ಅಸೂಯೆಯಿಲ್ಲದ ಮನಸ್ಸಿನಷ್ಟು ಅಮೂಲ್ಯ ಸಂಪತ್ತು ಬೇರೊಂದಿರದು.

ಇತರರ ಸಂಪತ್ತಿನ ಕುರಿತು ಅಸೂಯೆ ಪಡುವುದು ದಾರಿದ್ರ್ಯಕ್ಕೆ ಸಮಾನ. ಕಾರಣ, ಎಷ್ಟೇ ಐಶ್ವರ್ಯವಂತನಿರಲಿ, ಇತರರ ಸಂಪತ್ತಿನ ಕುರಿತು ಅಸೂಯೆಪಡುವುದರಿಂದ ತುಂಬ ಸಂಕಷ್ಟಕ್ಕೀಡಾಗುತ್ತಾನೆ. ಈ ಸಂಕಟವನ್ನು ಹೆಚ್ಚಿನ ದ್ರವ್ಯಪ್ರಾಪ್ತಿಯಿಂದ ಇಲ್ಲವೆ ಇತರರ ವಿಲಾಸ-ವೈಭವಗಳಿಂದ ನಿವಾರಿಸುವುದು ಸಾಧ್ಯವಿಲ್ಲ. ಕಾರಣ, ಈ ಸಂಕಟವು ಹೊರಗಿನಿಂದ ಬಂದೊದಗಿದುದಲ್ಲ–ತನ್ನಲ್ಲಿಯ ಅಸೂಯೆಯಿಂದಲೇ ಉಂಟಾದುದು. ಆದುದರಿಂದ ಅಸೂಯೆಯಿಲ್ಲದಿರುವ ಗುಣಹೊಂದಿದವನು ನಿಜಕ್ಕೂ ಪುಣ್ಯಾತ್ಮನೆಂದೇ ಹೇಳಬೇಕಾಗುತ್ತದೆ.

ತನ್ನ ಸ್ವಂತ ಮಾನಸಿಕ ಹಾಗೂ ಅಧ್ಯಾತ್ಮಿಕ ಒಳಿತಿನ ಕಡೆಗೆ ಅಲಕ್ಷಿಸುವಾತನೇ ಅಸೂಯಾಪರ ವಿಚಾರಗಳಿಗೆ ತನ್ನಲ್ಲಿ ಎಡೆಕೊಡುತ್ತಾನೆ. ಹೊರಗಿನ ಪ್ರಪಂಚದಲ್ಲಿ ಒಬ್ಬನೇ ಒಬ್ಬನು ಶತ್ರುವು ಇಲ್ಲದಾಗ್ಯೂ ಸುಖ ಲಭಿಸದಿರುವುದೆಂದರೆ ಅದು ಅಸೂಯೆಯಿಂದಾಗಿ; ಕಾರಣ, ಎಲ್ಲ ಸುಖ ಶಾಂತಿಗಳನ್ನು ಕೆಡಿಸಲು ಈ ಅಸೂಯೆಯೊಂದೇ ಸಾಕಾಗುತ್ತದೆ.

ನಿಮ್ಮ ಸ್ವಂತ ಮನಸ್ಸು ನಿಮ್ಮ ಕಡು ಶತ್ರುವಾಗಬಹುದು. ಸಂಪತ್ತಿದ್ದೂ ದಾರಿದ್ರ್ಯವಂತನಂತೆ ದುಃಖದ ಬಾಳು ಅನುಭವಿಸುವುದೆಂದರೆ, ಸಂತೋಷದ ನಡುವೆಯೂ ದುಃಖಿತನಾಗಿರುವುದೆಂದರೆ, ಇದಕ್ಕೆ ಕಾರಣ ಅಸೂಯೆ ಇರಬೇಕೆಂದೂ ಪ್ರತ್ಯೇಕ ಹೇಳಬೇಕಾಗಿಲ್ಲ. ನಿಮ್ಮ ಐಶ್ವರ್ಯವನ್ನು ಸೂರೆಗೊಳ್ಳಲು ಬೇರೆ ಕಳ್ಳಕಾಕರು ಬೇಕಾಗಿಲ್ಲ. ಅಸೂಯೆಯೊಂದೇ ಸಾಕಾಗುತ್ತದೆ.

ಇತರರು ಸುಖಸಂತೋಷದಲ್ಲಿರುವುದನ್ನು ಕಾಣಲಾಗದವರನ್ನು ಅದೃಷ್ಟದೇವತೆಯು ತಿರಸ್ಕರಿಸುವಳು. ಆಕೆ ಅಂತಹರನ್ನು ಕೂಡಲೇ ತನ್ನ ಅಕ್ಕ 'ದುರಾದೃಷ್ಟ'ದೇವತೆಯ ಪಾಡಿಗೆ ಬಿಟ್ಟು ತಾನು ದೂರವಾಗುವಳು.

(ಅದೃಷ್ಟದೇವತೆಯು ಹಿರಿಯ ಸಹೋದರಿ ದುರಾದೃಷ್ಟದೇವತೆ. 'ದುರಾದೃಷ್ಟ'ಪ್ರಾಪ್ತಿಗೆ ಕಾರಣಗಳು ಅಕ್ಕ. 'ಅದೃಷ್ಟ'ಪ್ರಾಪ್ತಿಗೆ ಕಾರಣಗಳು ತಂಗಿ.)

ಎಲ್ಲ ಸೌಭಾಗ್ಯಗಳು ನಿಮ್ಮಲ್ಲಿ ಸಮೃದ್ಧಿಯಾಗಿರಬಹುದು; ಅಂತೆಯೇ, ಎಲ್ಲ ಸದ್ಗುಣಗಳಿಂದ ನೀವು ಭರಿತರಾಗಿರಬಹುದು, ಆದರೆ, ಅಸೂಯೆಯು ಒಂದು ಕಪ್ಪು ಚುಕ್ಕಿ ಕಂಡುಬಂತೆಂದರೆ ನಿಮಗೆ ನರಕದ ಬೆಂಕಿಯ ಜ್ವಾಲೆಗಳನ್ನು ಕಾಣಿಸಲು ಅಷ್ಟೇ ಸಾಕಾಗುತ್ತದೆ.

ಅಸೂಯೆಯು ಇಹ ಹಾಗೂ ಪರ ಎರಡರಲ್ಲಿಯೂ ಮನುಷ್ಯನಿಗೆ ನರಕಪ್ರಾಪ್ತಿಯನ್ನುಂಟುಮಾಡುವುದು.

ಅಸೂಯೆಯಿಂದ ಯಾರೂ ಸಿರಿವಂತರಾದುದಿಲ್ಲ. ಅಸೂಯೆಪಡದೆ ಇರುವುದರಿಂದ ಯಾರೂ ಏನನ್ನೂ ಕಳಕೊಂಡುದಿಲ್ಲ.

೧೦. ನಿಯಮಬದ್ಧವಾದ ಜೀವನ

ಜೀವನಕ್ಕಿಂತ, ಜೀವನದಲ್ಲಿ ಅನುಸರಿಸಬೇಕಾದ ಶಿಸ್ತು ಅತ್ಯಮೂಲ್ಯವಾದುದು.

ಒಬ್ಬನು ಹಲವು ತತ್ತ್ವಶಾಸ್ತ್ರಗಳನ್ನು ಅಭ್ಯಸಿಸಿ ಸಂದೇಹಗಳನ್ನು ನಿವಾರಿಸಿಕೊಳ್ಳಬಹುದು. ಆದರೆ, ಕೊನೆಯಲ್ಲಿ ಪ್ರಯೋಜನಕ್ಕೆ ಬರುವಂತಹುದೆಂದರೆ ನಿಯಮಬದ್ಧವಾದ ಜೀವನವೊಂದೇ ಹೊರತು ಬೇರೆಯಲ್ಲ. ಆದುದರಿಂದ ಎಷ್ಟೇ ಎಡರುತೊಡರುಗಳೂ ಬರಲಿ, ಜೀವನವು ನಿಯಮಬದ್ಧವಾಗಿರುವಂತೆ ಕಾಪಾಡುವುದು ಅತ್ಯವಶ್ಯ.

ನಿಯಮಬದ್ಧವಾದ ಜೀವನವು,–ಮನುಷ್ಯನು ಯಾವ ವರ್ಗಕ್ಕೆ ಸೇರಿದವನೂ ಇರಲಿ,—ಆತನಿಗೆ ಗೌರವವನ್ನು ಸಂಪಾದಿಸುತ್ತದೆ. ಇದು ಎಲ್ಲಿ ಕಂಡುಬರುವುದಿಲ್ಲವೋ ಅಲ್ಲಿ ಅವನು ಎಷ್ಟೇ ಕುಲೀನ ಇಲ್ಲವೇ ಪ್ರಸಿದ್ಧ ಕುಟುಂಬಕ್ಕೆ ಸೇರಿದವನೂ ಇರಲಿ—ಅವನನ್ನು ಅದು ಉಳಿಸದು.

ಧರ್ಮಶಾಸ್ತ್ರಗಳನ್ನು ಮರೆತಿದ್ದಿದ್ದರೆ ಪಂಡಿತನು ತಿರುಗೊಮ್ಮೆ ಓದಿ ಆ ಕೊರತೆಯನ್ನು ನೀಗಾಡಿಸಬಹುದು, ಆದರೆ ಅವನು ಜೀವನದಲ್ಲಿ ನಿಯಮವನ್ನು ಮರೆತನೆಂದರೆ, ಅತ್ಯಂತ ಉಚ್ಚಜನ್ಮವನ್ನು ಕಳೆದು ಅದರ ಸಾರ್ಥಕತೆ ಹೊಂದದಂತಾಗುವುದು.

ವಿದ್ಯೆಯಲ್ಲಿ ಕಳಕೊಂಡದ್ದನ್ನು ನಂತರ ಪೂರ್ತಿಮಾಡಲು ಬರುತ್ತದೆ. ಆದರೆ, ಜೀವನದಲ್ಲಿ ಕಳೆದುಕೊಂಡುದು ಸುತರಾಂ ನಷ್ಟಪಾದಂತೆಯೆ ಸರಿ.

ಕಲಿತ ಮಂದಿ, ತಾವು ಕಲಿತವರಿದ್ದೂ ಜೀವನದ ತತ್ವಗಳಲ್ಲೊಂದಾದ ಸಾಮಾಜಿಕ ಸಹಕಾರವನ್ನು ಮರೆತರೆಂದರೆ ಅಜ್ಞಾನವನ್ನು ವ್ಯಕ್ತಪಡಿಸಿದಂತಾಗುತ್ತದೆ.

ನಡತೆ ಮತ್ತು ಗುಣದಲ್ಲಿ ಆತ್ಮಸಂಯಮನ ಸಾಧ್ಯವಾಗದ ನರನು ವಿಶೇಷ ಪಾಂಡಿತ್ಯಹೊಂದಿದ್ದರೂ ಕೇವಲ ನಿರರ್ಥಕ. ಧಾರ್ಮಿಕ ಇಲ್ಲವೆ ತಾತ್ವಿಕಜ್ಞಾನಕ್ಕಿಂತ ನಿಯಮಬದ್ಧವಾದ ಜೀವನ ಮತ್ತು ಸಮಾಜದಲ್ಲಿ ಸಹಕಾರಗಳು ಅತಿ ಮುಖ್ಯ.

೧೧. ದುಷ್ಟಪ್ರೇಮ

ಬೇರೊಬ್ಬನಿಗೆ ಸೇರಿದ ವ್ಯಕ್ತಿಯ ಕುರಿತು ಕೆಟ್ಟ ಭಾವನೆಗಳನ್ನು ಮನಸ್ಸಿನಲ್ಲಿ ಎಣಿಸುವುದು ಮೂರ್ಖತನವೆನಿಸುವುದು. ಧರ್ಮ ಇಲ್ಲವೇ ಪ್ರಾಪಂಚಿಕ ಜ್ಞಾನ ತಿಳಿದ ಮಂದಿ ಯಾವ ಕಾಲಕ್ಕೂ ಅಂತಹ ಅವಿವೇಕಕ್ಕೆ ಆಸ್ಪದ ಕೊಡಲಾರರು.

ನಿಜವಾದ ನಡತೆಯಿಂದ ಹಾದಿ ತಪ್ಪಿ ನಡೆಯುವವರಲ್ಲಿ ಮತ್ತೊಬ್ಬನ ಮನೆಯ ಹೊಸ್ತಿಲೊಳಗೆ ಕಾಲಿಟ್ಟು ಅವನ ಸಂಸಾರದಲ್ಲಿ ಕೈಹಾಕುವವನು ಅತಿ ಮೂರ್ಖನು.

ಕಾರಣ, ಅಂತಹ ಅಪರಾಧದಲ್ಲಿ ಅವನು ಎಣಿಸಿದಷ್ಟು ಸುಖೋಪಭೋಗಗಳು ಆವನಿಗೆ ದೊರಕಲಾರವು, ಮಾತ್ರವಲ್ಲ, ಅಪರಾಧಗೈದ ಮಾತ್ರಕ್ಕೆ ಮತ್ತೆ ನಿಂದೆ ಮತ್ತು ಶಿಕ್ಷೆಗಳ ಭಯಕ್ಕೊಳಪಟ್ಟೇ ಅವನ ಶೇಷ ಜೀವನವನ್ನು ಸವೆಯಬೇಕಾಗುವುದು.

ವಿಶ್ವಾಸವೆಣಿಸಿದವನಿಗೆ ದ್ರೋಹ ಬಗೆವ ದುಷ್ಟಭಾವನೆಗಳಿಗೆ ಮನಸ್ಸಿನಲ್ಲಿ ಆಸ್ಪದಕೊಡುವುದಕ್ಕಿಂತ ಸಾಯುವುದು ಲೇಸು.

ಎಷ್ಟೇ ಘನಸ್ಥಿಕೆಯ ಪೀಠವನ್ನೇರಿದ ಮನುಷ್ಯನಿರಲಿ, ಮತ್ತೊಬ್ಬನ ಸಂಸಾರವನ್ನು ಕಲುಷಿತವನ್ನಾಗಿ ಮಾಡುವ ದುಷ್ಟ ಪ್ರೇರಣೆಗೆ ಅಧೀನನಾದನೆಂದರೆ ಅವನ ಮಹತ್ವಿಕೆಗೆ ಮೌಲ್ಯವೇ ಇಲ್ಲ. ತನ್ನ ಮಹತ್ವವೆಲ್ಲ

ವನ್ನೂ ಕಳಕೊಂಡು, ಮುಂದೆ ಮರಣಪರ್ಯಂತ ಅವನು ಅವಮಾನ ಹೊಂದಿಕೊಂಡಿರಬೇಕಾಗುತ್ತದೆ.

ಮತ್ತೊಬ್ಬನ ಪತ್ನಿಯ ಮೇಲೆ ಕಾಮುಕದೃಷ್ಟಿ ಇಲ್ಲವೆ ದುಷ್ಟಪ್ರೇಮ ದೃಷ್ಟಿ ಬೀರುವುದು ಸುಲಭವಿದೆಯಾದರೂ ಅದರಿಂದೊದಗುವ ಕಳಂಕ ಮತ್ತು ಅವಮಾನವು ಆಜೀವ ತೊಲಗದು.

ಅದರಿಂದೊದಗುವ ಸುಖವು ಕ್ಷಣಿಕ. ಆ ಪಾಪದ ಹೊರೆಯು ಮಾತ್ರ ಜೀವನದಲ್ಲಿ ಎಂದೂ ತೊಲಗುವಂತಿಲ್ಲ. ಆದರ ಪರಿಣಾಮ ಗಳಿಂದ ತಪ್ಪಿಸಿಕೊಳ್ಳುವುದು ಆ ಪಾಪಗೈದಷ್ಟು ಸುಲಭವಲ್ಲ.

ಮತ್ತೊಬ್ಬನ ಮನೆಯ ಪಾವಿತ್ರ್ಯ ಕೆಡಿಸಿದವನ ಬಾಳ್ವೆಯಲ್ಲಿ ಶತ್ರುತ್ವ, ಪಾಪ, ಅಂಜಿಕೆ ಮತ್ತು ಅವಮಾನಗಳು ಮುಂದೆ ಎಂದೆಂದಿಗೂ ಶಾಶ್ವತ ವಾಗಿ ನೆಲಸುವುವು.

ಇಂತಹ ಪಾಪದ ವೈಯಕ್ತಿಕ ಅನುಭವವುಳ್ಳವರಿಗೆ ಈ ಅಧ್ಯಾಯ ದಲ್ಲಿ ಬರೆದಿರುವುದೆಲ್ಲ ವಿಚಾರಾತ್ಮಕವೆಂದು ಹೊಳೆಯದಿರದು. ಕವಿಯ ಅಂತರಾಳದ ಭಾವನೆಯನ್ನು ಅವರು ಮಾತ್ರ ಚೆನ್ನಾಗಿ ತಿಳಿಯಬಲ್ಲರು.

ಇತರರ ಸೊತ್ತಿನ ಮೇಲೆ ದುಷ್ಟಪ್ರೇಮದೃಷ್ಟಿ ಇಡುವವನು ನಿಜವಾದ ಗೃಹಸ್ಥನಲ್ಲ. ಅವನು ಗುಣನಡತೆಯಲ್ಲಿ ಒಳ್ಳೆಯವನಿರಬಹುದು, ಅನು ಕೂಲ ಪತಿಯೂ ಪಿತನೂ ಇರಬಹುದು, ಆದರೆ ಅವನಲ್ಲಿ ಅಂತಹ ಪಾಪೀ ಭಾವನೆಗೆ ಸ್ಥಾನವಿದ್ದರೆ ಮಲಿನನೆಂದೇ ಜಗವು ತಿಳಿಯುವುದು.

ಮನಸ್ಸನ್ನು ಅಂಕೆಯಲ್ಲಿಟ್ಟುಕೊಳ್ಳುವುದರಲ್ಲಿ ಮತ್ತು ಮನಸ್ಸಿನಲ್ಲಿ ದುಷ್ಟವಿಚಾರಗಳು ಉತ್ಪನ್ನವಾಗದಂತೆ ತಡೆಯುವುದರಲ್ಲಿ ಮನುಷ್ಯನ ಮನುಷ್ಯತ್ವ ಪ್ರದರ್ಶನವಾಗಬೇಕು. ಅದೇ ಉತ್ತಮ ಧರ್ಮ ಮತ್ತು ಸಮಾಜತತ್ವವೆನಿಸುವುದು.

ಆತ್ಮಸಂಯಮನವಿಲ್ಲದವನು, ಅಶ್ಲೀಲಭಾವನೆಗಳ ಕಡೆಗೆ ಸುಲಭ ವಾಗಿ ಆಕರ್ಷಿತನಾಗುವವನು ಷಂಡನೆಂಬ ಹೆಸರಿಗೆ ತಕ್ಕವನಿರುತ್ತಾನೆ.

೧೨. ಬಡವರ ಉದ್ಧಾರ

ಅವಶ್ಯವಿದ್ದವರಿಗೆ ಕೊಡಲ್ಪಟ್ಟುದೇ ದಾನವೆನಿಸುವುದು. ಇತರರಿಗೆ ಕೊಡುವುದೆಲ್ಲ ವ್ಯಾಪಾರ ವಹಿವಾಟು ನಡೆಸಿದಂತೆ. ಕಾರಣ, ಅಲ್ಲಿ ಕೊಟ್ಟು ದನ್ನು ಮರುಪಾವತಿ ಮಾಡಬೇಕೆಂಬ ನಿರೀಕ್ಷೆಯಿದೆ.

ದಾರಿದ್ರ್ಯಾವಸ್ಥೆಯಿಂದ ದಾನಕೊಳ್ಳುವುದು ಅನಿವಾರ್ಯವಾಗಿ ಕಂಡುಬಂದರೂ ಅದರಿಂದ ಮನಸ್ಸಿಗೆ ನೋವು ಇದ್ದೇ ಇದೆ. ಬಡವರಿಗೆ ದಾನ ಮಾಡುವುದರಲ್ಲಿ ಒಳ್ಳೆಯದಿದೆ. ಹಾಗೆ ದಾನ ಮಾಡಿದುದನ್ನು ಪುರಸ್ಕರಿಸುವ ಬೇರೊಂದು ಪ್ರಪಂಚವಿಲ್ಲದಿದ್ದರೂ ಆ ದಾನವು ಶ್ರೇಷ್ಠ ದಾನವಾಗಿದೆ.

ಕೊಡುವವನಿಗೆ ದಾನವು ಹರ್ಷವನ್ನುಂಟುಮಾಡುವುದಾದರೂ ಕೊಳ್ಳುವವನಿಗೆ ಅದು ಮನಸ್ಸಿಗೆ ನೋವನ್ನುಂಟುಮಾಡುತ್ತದೆ. ಇದು ಮಾನವ ಪ್ರಕೃತಿ.

ಮತ್ತೊಬ್ಬನು ದಾನಕ್ಕಾಗಿ ತಮ್ಮಲ್ಲಿಗೆ ಬರುವುದು ಕೆಲವರಿಗೆ ಅಪ್ರಿಯವಾಗಿ ತೋರಬಹುದು. ಆದರೆ, ಈ ಅಪ್ರಸನ್ನತೆ ಎಲ್ಲಿಯ ವರೆಗೆ? ಕಂಗೆಟ್ಟ ಪರಿಸ್ಥಿತಿಯಲ್ಲಿದ್ದವನ ಹರ್ಷವದನವನ್ನು ನೀವು ಕಾಣುವ ವರೆಗೆ ಮಾತ್ರ.

ಆ ಹರ್ಷವದನವನ್ನು ಕಂಡೊಡನೆ, ಆ ಹರ್ಷವನ್ನು ಒದಗಿಸಿದ ಭಾಗ್ಯದಾತರು ನೀವಾಗಿರುವಿರಿ ಎಂಬ ಆತ್ಮಾನಂದವು ತನ್ನಿಂದತಾನೇ ಉಂಟಾಗುವುದು. ಸಂಸಾರದಲ್ಲಿ ಹಲವು ಬನ್ನಬವಣೆಗಳನ್ನು ಅನುಭವಿಸುತ್ತಿರುವಾಗಲೇ ಈ ಒಂದು ಸತ್ಕೃತಿ ನಮ್ಮ ಕೈಯಿಂದ ಒದಗಿದ ಬಗ್ಗೆ ಸ್ವೈಜವಾದ ಆನಂದವು ಪ್ರತಿಯೊರ್ವ ದಾನಿಯಲ್ಲುಂಟಾಗುವುದು.

ಸರ್ವತ್ಯಾಗಿಯಾದ ಸನ್ಯಾಸಿಯು ಹಸಿವೆಯನ್ನು ಸಹಿಸಬಲ್ಲನು. ಆ ಸಹನೆಯೇ ಅವನಲ್ಲಿ ಒಂದು ಅದ್ಭುತ ಶಕ್ತಿಯನ್ನು ಉತ್ಪಾದಿಸುವುದು. ಆದರೆ, ಮತ್ತೊಬ್ಬನ ಹಸಿವೆಯನ್ನು ಹೋಗಲಾಡಿಸುವುದು ಹಸಿವೆ ಸಹಿಸುವುದಕ್ಕಿಂತಲೂ ಅತಿಶಯವಾದ ಪುಣ್ಯಕಾರ್ಯ ಎನ್ನುವುದರಲ್ಲಿ ಅನುಮಾನವಿಲ್ಲ.

ದಾರುಣ ಕಷ್ಟ ಹಾಗು ಸತ್ವಪರೀಕ್ಷೆಗಳನ್ನು ಎದುರಿಸುವುದು ದಾರ್ಢ್ಯವಹುದು. ಆದರೆ, ಇತರ ಕಷ್ಟಗಳಲ್ಲಿ ಅನುತಾಪಪಟ್ಟು ಅದನ್ನು ನಿವಾರಿಸುವ ಬಗ್ಗೆ ಕೈಲಾದ ಯತ್ನ ನಡೆಸುವುದು ಅದಕ್ಕಿಂತಲೂ ಅತಿಶಯವಾದ ಧೈರ್ಯವಾಗಿರುತ್ತದೆ.

ಹಸಿವೆಯಿಂದ ಜನರನ್ನು ಉದ್ಧರಿಸುವವನನ್ನೇ ಭಾಗ್ಯವಂತನೆನ್ನಬೇಕು; ಕಾರಣ, ಹಾಗೆ ಮಾಡುವುದರಿಂದ ಆತನು ತನ್ನ ಭಾಗ್ಯನಿಧಿಯನ್ನು ಸುಭದ್ರವಾಗಿ ಕಾಪಾಡಿದಂತಾಗುವುದು.

ಕೊಡುವುದರಲ್ಲಿ ಆನಂದಪಡದವನನ್ನು ದೌರ್ಭಾಗಿ ಎನ್ನಬೇಕು. ಕಾರಣ, ಇದ್ದಾಗ ಒಳ್ಳೆನೆಂದು ಎದೆ ಕಲ್ಲುಮಾಡಿದವನು ಇಹ ತೊರೆವಾಗ ತಾನು ಗಳಿಸಿದುದನ್ನು ಕೊಂಡುಹೋಗಲಾರನು; ಅದನ್ನು ಇಲ್ಲಿ ಬಿಟ್ಟೇ ಕಣ್ಮರೆಯಾಗಬೇಕಾಗುವುದು.

ದಾನದ ಮಹತ್ವ ಎಷ್ಟೆಂದು ತಿಳಿದವನು ಯಾವ ಕಾಲಕ್ಕೂ ದಾನ ಮಾಡಲು ಹಿಂಜರಿಯಲಾರನು. ಆದರಿಂದ ಉಂಟಾಗುವ ಅಮಿತಾನಂದದ ಅನುಭವವು ಒಮ್ಮೆಯಾಯಿತೆಂದರೆ ಮತ್ತೆ ಅದನ್ನು ಅವನು ಎಂದೂ ಮರೆಯಲಾರನು. ದಾರಿದ್ರ್ಯದ ದೆಸೆಯಿಂದ ಭಿಕ್ಷೆ ಬೇಡಬೇಕಾಗಿ ಬಂದವನನ್ನು ನಿರ್ಭಾಗಿಯೆನ್ನಬೇಕಾಗುವುದು. ಆದರೆ, ಸಂಕುಚಿತ ಮನೋವೃತ್ತಿಯಿಂದ ಹಸಿದು ಮನೆಬಾಗಿಲಿಗೆ ಬಂದವನನ್ನು ತಿರಸ್ಕರಿಸುವವನು ಕಡು ದುರ್ಭಾಗಿ.

ಮರಣವೆಂದರೆ ಅದರಷ್ಟು ದುಃಖದಾಯಕ ವಿಷಯ ಬೇರೊಂದಿಲ್ಲ. ಆದರೆ, ಒಳ್ಳೆಯವನಿಗೆ ಕಂಗೆಟ್ಟವರನ್ನು ಉದ್ಧರಿಸುವರೆ ನಿಸ್ಸಹಾಯತೆ ಯೊದಗಿದಾಗ, ಅದು ಆಹ್ಲಾದಕರವಾಗಿ ತೋರುವುದು.

೧೩. ಸಾರ್ವಜನಿಕ ಪ್ರಿಯತೆ

ಜಗತ್ತಿನ ದೃಷ್ಟಿಯಲ್ಲಿ ಮನುಷ್ಯನನ್ನು ಅತ್ಯುಚ್ಚ ಗೌರವಸ್ಥಾನಕ್ಕೆ ಏರಿಸಲು ದಾರಿದ್ರ್ಯವು ಸಹಾಯವಾಗುವುದಾದರೆ, ಅದನ್ನೆ ಐಶ್ವರ್ಯ ವೆಂದು ಕರೆದರೆ ತಪ್ಪೇನಂತೆ? ಕೆಲವು ಸಂದರ್ಭಗಳಲ್ಲಿ ಮರಣವೆಂದರೆ ಅಮರಜೀವನವೆನಿಸಲ್ಪಡುವುದು.

ಒಳ್ಳೆಯವರ ಪ್ರೀತಿಗೆ ಪಾತ್ರವಾಗುವ ಸಂದರ್ಭ ಕಳಕೊಂಡಾಗ, ನಮ್ಮ ದೋಷವನ್ನೇ ನಾವು ಹಳಿದುಕೊಳ್ಳಬೇಕಲ್ಲದೆ ಜಗತ್ತನ್ನು ಹಳಿಯು ವುದರಲ್ಲಿ ಅರ್ಥವಿಲ್ಲ.

೧೪. ಕರುಣೆ

ಈ ಜಗತ್ತಿನಲ್ಲಿ ಬೇರೆ ಬೇರೆ ಧರ್ಮಗಳು ಬೇರೆ ಬೇರೆ ವಿಷಯಗಳನ್ನು ಬೋಧಿಸುತ್ತವೆ. ಆದರೆ, ಮನುಷ್ಯನಿಗೆ ಆಧ್ಯಾತ್ಮಿಕ ಬಂಧವಿಮೋಚನೆ ಕರುಣಿಸುವ ವಿಷಯವನ್ನೇ ಪ್ರತಿಯೊಂದು ಧರ್ಮದಲ್ಲಿ ಕರುಣೆಯೆಂದು ಕರೆಯಲಾಗಿದೆ.

ಎಲ್ಲರನ್ನು ಪ್ರೀತಿಯಿಂದ ಕಾಣುವವನಿಂದ ಆತ್ಮಕ್ಕೆ ಅಪಾಯಕಾರಿಯಾದ ಪಾಪವೂ ದೂರವಾಗುತ್ತದೆ.

ಭೌತಿಕ ಪ್ರಪಂಚದಲ್ಲಿ ವಾಸ್ತವಿಕ ಸಂಪತ್ತಿನ ಮೇಲೆ ನಮ್ಮ ಸುಖ ಸಂತೋಷಗಳು ಅವಲಂಬಿಸಿಕೊಂಡಿವೆಯಾದರೆ, ಪರದಲ್ಲಿ ಕರುಣೆಯೇ ಸುಖಸಂತೋಷಗಳ ಆಧಾರವಾಗಿದೆ.

ಮನೆಮಾರು, ಆಸ್ತಿಪಾಸ್ತಿ, ಸರ್ವಸ್ವವನ್ನೂ ಕಳಕೊಂಡವರು ಪುನರಪಿ ಅದನ್ನು ಹೊಂದಿ ಮೆರೆಯುವುದು ಶಕ್ಯವಿದೆ. ಆದರೆ, ಕರುಣೆಯ ಕರ್ತವ್ಯ ಮರೆತವರು ಅದನ್ನು ತಿರಿಗಿ ಹೊಂದುವ ಆಸೆಯಿಲ್ಲ.

ಸಂಪತ್ತು ಕಳೆದುಹೋದುದು ತಿರಿಗಿ ಲಭಿಸಬಹುದು. ಆದರೆ, ಒಳ್ಳೆಯತನ ಒಮ್ಮೆ ಕಳಕೊಂಡರೆ ಮುಂದೆ ಎಂದೆಂದೂ ಕಳಕೊಂಡಂತೆಯೆ.

ಹೃದಯದಲ್ಲಿ ಕರುಣಾಮೃತ ಇಲ್ಲದವನು ಇತರ ಗುಣಗಳ ಸಹಾಯದಿಂದ ಧರ್ಮ ಅಭ್ಯಾಸಿಸುವುದೆಂದರೆ ನಿರಕ್ಷರಕುಕ್ಷಿಯು ಬರಹ ಕಲಿಸಲು ಹೊರಟಂತೆ.

ಕರುಣೆಯಿಲ್ಲದೆ ಒಳ್ಳೆಯತನ ಜಯಿಸುವುದು ಅಸಾಧ್ಯ.

ತನ್ನ ಅಧೀನದಲ್ಲಿದ್ದವರ ಮೇಲೆ ಕ್ರೌರ್ಯ ಪ್ರದರ್ಶಿಸುವ ಪ್ರೇರಣೆಯುಂಟಾದಾಗ ತನಗಿಂತ ಬಲವಾದವರ ಮುಂದೆ ತಾನು ಕೈಕಾಲು ನಡುಗಿಸಿಂತ ದೃಶ್ಯ ಕಲ್ಪಿಸಿಕೊಳ್ಳಬೇಕು.

ನಾವು ಇತರರಿಗೆ ನೋವುಂಟುಮಾಡಿದುದರ ಅನುಭವ ಎಂಥದ್ದೆಂದು ತಿಳಿಯಬೇಕಾದರೆ ಇತರರಿಂದ ನಮಗೆ ನೋವುಂಟಾದುದನ್ನು ಸ್ಮರಿಸಿಕೊಳ್ಳಬೇಕು.

ಪ್ರಾಣಿಗಳ ಲೋಕದಲ್ಲಿ

—ಮಿತವ್ಯಯಪರವಾದ ಸ್ವಾಭಾವಿಕ ಬುದ್ಧಿಯು, ದೀರ್ಘ ಚಳಿಗಾಲವಿದ್ದು ಆಹಾರವು ದೊರೆಯಲು ಕಷ್ಟಸಾಧ್ಯವಾಗುವ ಅತಿ ಹಿಮದ ದೇಶಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.

 ಯು, ದೀರ್ಘಕಾಲದ ಚಳಿಯ ತನ್ನ ನಿದ್ದೆಗೆ ಹೋಗುವ ಮುನ್ನ ನೂರಾರು  ಭಾರವನ್ನು ತುಂಬಿಕೊಂಡ ಮೈಯ್ಯನ್ನು ಬೆಳಸಿಕೊಳ್ಳುವುದು.  ಯು ಕೂಡ ಚಳಿಗಾಲಕ್ಕೆ ಮೊದಲು ಹೆಚ್ಚು ಮೈಭಾರ ಗಳಿಸಿಕೊಂಡು ಆ ಮೇಲೆ ಅದನ್ನು  ಯಲ್ಲಿ ವ್ಯಯಿಸುವುದು.  ಚಳಿಗಾಲಕ್ಕೆ  ನ್ನು ಮತ್ತು ವಿಪುಲವಾಗಿ  ನ್ನೂ, ಮರಗಳಲ್ಲಿನ ತೂತುಗಳಲ್ಲಿ ಹಾಗು ನೆಲದಡಿಯ ಬಿಲಗಳಲ್ಲಿ ತನ್ನ ಉಗ್ರಾಣದಲ್ಲಿ ತುಂಬಿಡುವುದು. ಹೊಲದ ಇಲಿಗಳೂ ಹಾಗೇ ಮಾಡುವುವು.

ಉಳಿಸುವ ಉಪಾಯವು ಉಳಿಯುವ ಉಪಾಯವಾಗಿದೆ.

ನಿಮ್ಮ ಹಣವನ್ನು ಸಿಂಡಿಕೇಟ್ ಬೇಂಕಿನ
'ಪಿಗ್ಮಿ' ಠೇವಣಾತಿಯಲ್ಲಿರಿಸಿ, ಉಳಿಸಿ, ಬೆಳೆಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.,
ಹೆಡ್ ಆಫೀಸ: ಉಡುಪಿ—
ಅಥವಾ ನಿಮ್ಮೂರಲ್ಲಿರುವ ಶಾಖೆಗಳಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE, LTD.

Edited, Printed and Published by K. V. Shenoy
at The Prabhat Printers, Ltd., Mangalore-1.